ತಕ್ಷಣ ಬಿಡುಗಡೆಗಾಗಿ

# ವಿಶ್ವಬ್ಯಾಂಕ್

2005/006/SAR

ಸಂಪರ್ಕಗಳು: ಸಂದೀಪ್ ಮಜುಮ್‌ದಾರ್: (91 11) 2461-7241
ಇ–ಮೈಲ್: smozumder@worldbank.org
ವಾಷಿಂಗ್‌ಟನ್‌ನಲ್ಲಿ: ಬೆಂಜಾಮಿನ್ ಕ್ರೋ: (202) 473-5105
ಇ–ಮೈಲ್: bcrow@worldbank.org

## ತಮಿಳು ನಾಡಿನಲ್ಲಿ ಬಡತನ ಕಡಿಮೆಗೊಳಿಸಲು ವಿಶ್ವಬ್ಯಾಂಕ್‌ನಿಂದ 120 ಮಿಲಿಯ ಅಮೇರಿಕನ್ ಡಾಲರುಗಳ ಸಾಲ

### ರಾಜ್ಯದಾದ್ಯಂತ 12 ಮಿಲಿಯ ಬಡಜನ ಉದ್ಧಾರದ ಗುರಿ

ವಾಷಿಂಗ್ಟನ್, ಜುಲೈ 12, 2005– 62 ಮಿಲಿಯ ಜನ ಸಂಖ್ಯೆ ಹೊಂದಿದ್ದು, 20 ಲಕ್ಷಕ್ಕಿಂತಲೂ ಹೆಚ್ಚಿನ ಜನರು ಬಡತನ ರೇಖೆಗಿಂತ ಕೆಳಗಿನಮಟ್ಟದಲ್ಲಿ ವಾಸಮಾಡುತ್ತಿರುವ ತಮಿಳುನಾಡಿನಲ್ಲಿ ಬಡವರ ವ್ಯಾಪಕ ಸಶಕ್ತೀಕರಣ ಮತ್ತು ಬಡತನ ಕಡಿತಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು, ಅನುಕೂಲವಾಗುವಂತೆ ತಮಿಳುನಾಡು ಸರಕಾರಕ್ಕೆ ವಿಶ್ವಬ್ಯಾಂಕು ಇಂದು 120 ಮಿಲಿಯ ಅಮೇರಿಕನ್ ಡಾಲರುಗಳ ಸಾಲ ಮಂಜೂರು ಮಾಡಿದೆ.

ತಮಿಳುನಾಡು ಎಂಪವರ್‌ಮೆಂಟ್ ಆ್ಯಂಡ್ ಪಾವರ್ಟಿ ರಿಡಕ್ಷನ್ ಪ್ರೊಜೆಕ್ಟ್ "ಮತ್ತು ವಾಜವು" ಎಂದು ಕರೆಯಲಾಗುತ್ತಿದೆ. ಅಂದರೆ ಹೊಸ ಬದುಕು ಎಂದರ್ಥ. ಬಡ ಸಮುದಾಯಗಳಿಗಾಗಿ ಸಾಮಾಜಿಕ ಬಂಡವಾಳ ನಿರ್ಮಾಣ ಹಾಗೂ ಅವಕಾಶಗಳನ್ನು ಒದಗಿಸಿ, ಅವರ ಬದುಕಲ್ಲಿ ಬದಲಾವಣೆ ತರುವಂತಹ ಯೋಜನೆಗಳನ್ನು ಅವರಿಂದಲೇ ರೂಪಿಸಿ, ಅನುಷ್ಠಾನಗೊಳಿಸುವಲ್ಲಿ ಅವರನ್ನು ತೊಡಗಿಸಿಕೊಳ್ಳುವುದು.

ತಮಿಳುನಾಡು, ಕಳೆದೊಂದು ದಶಕದಲ್ಲಿ ಬಡತನ ಕಡಿಮೆಗೊಳಿಸುವ ನಿಟ್ಟಿನಲ್ಲಿ ಗಣನೀಯ ಸಾಧನೆ ಮಾಡಿದೆ. ಆದರೆ 12 ಮಿಲಿಯಕ್ಕಿಂತಲೂ ಅಧಿಕ ಜನರು ಇನ್ನೂ ಸಹ ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿಯೇ ಜೀವನ ನಡೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಹೆಚ್ಚಾಗಿ, ಜನರು ಕೃಷಿಯನ್ನೇ ಅವಲಂಬಿಸಿದ್ದು ಬರಪೀಡೆಗೆ ಒಳಗಾಗುತ್ತಾರೆ. ಸಾಮಾಜಿಕ ಅಂತರ ಹಾಗೂ ಗಂಡು ಹೆಣ್ಣೆಂಬ ಭೇದ ಹೊರತು ಪಡಿಸುತ್ತವೆ. ಈ ಯೋಜನೆಯ ಗುರಿಯ ಹಿಂದಿನ ಮುಖ್ಯ ಉದ್ದೇಶ ಅಂದರೆ, ರಾಜ್ಯದಾದ್ಯಂತ ಇರುವ ಅಂಗಹೀನರು ಹಾಗೂ ನಿರ್ಗತಿಕರು, ವಿಧವೆಯರು ಅಸಹಾಯಕ ಮಹಿಳೆಯರು, ವೃದ್ಧರು, ಹಾಗೂ ಬುಡಕಟ್ಟಿನವರು ಸೇರಿದಂತೆ ಕಡುಬಡವರ ಜೀವನೋಪಾಯದ ಸುಧಾರಣೆ.

"ಅಭಿವೃದ್ಧಿ ಸೌಕರ್ಯಗಳು ತಲಪದೇ ಇರುವಂತಹ ಗ್ರಾಮೀಣ ಬಡವರು ಹಾಗೂ ಬಡತನ ಎದುರಿಸುವ ಇತರ ಪಂಗಡಗಳ ಬಡತನ ಕಡಿತಗೊಳಿಸಲು ಮಾಡುವ ತಮಿಳುನಾಡು ಸರಕಾರದ ಪ್ರಯತ್ನಕ್ಕೆ ಈ ಯೋಜನೆ ಬೆಂಬಲ ನೀಡುತ್ತದೆ" ಎನ್ನುತ್ತಾರೆ ವಿಶ್ವಬ್ಯಾಂಕಿನ ಕಂಟ್ರೀ ಡೈರೆಕ್ಟರ್ ಮೈಕೆಲ್ ಕಾರ್ಟರ್. "ಬಡ ಮಹಿಳೆಯರ ಸಶಕ್ತೀಕರಣಕ್ಕೆ ಹೆಚ್ಚಿನ ಒತ್ತು ಒಂದೆಡೆಯಾದರೆ, ಹಳ್ಳಿಗಳಲ್ಲಿ ಅವರಿಗೆ ಸುಲಭದಲ್ಲಿ ಜೀವನೋಪಾಯ ಲಭ್ಯವಾಗುವಂತೆ ಮಾಡುವ ಗುರಿ ಇನ್ನೊಂದೆಡೆ. ಇದು ಬಹಳ ಮುಖ್ಯ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮ ಅಥವಾ ಪುತ್ತು ವಾಜುವು ಕಾರ್ಯಕ್ರಮವನ್ನು, ಈ ಉದ್ದೇಶಗಳನ್ನು ಸಾಕಾರಗೊಳಿಸುವ ಸಲುವಾಗಿಯೇ ರೂಪಿಸಲಾಗಿದೆ.

ಈ ಯೋಜನೆಯನ್ನು ಈ ಕೆಳಗಿನ ಮೂರು ಮುಖ್ಯ ಅಂಶಗಳಿಂದ ರೂಪಿಸಲಾಗಿದೆ:

- ಗ್ರಾಮೀಣ ಜೀವನೋಪಾಯ ಕಾರ್ಯಕ್ರಮ : ಜೀವನೋಪಾಯ ಅಭಿವೃದ್ಧಿಗೊಳಿಸಬಹುದಾದ ಸಮುದಾಯ ಸಂಸ್ಥೆಗಳಿಗೆ ಬೆಂಬಲ ನೀಡುವ ಅಂಶವಿದು. ಸಮುದಾಯಗಳಿಗೆ, ಯೋಜನೆ, ಅವರ ಹಣಕಾಸುಗಳ ನಿರ್ವಹಣೆ ಹಾಗೂ ಬಂಡವಾಳಕ್ಕೆ ಸಂಪನ್ಮೂಲಗಳು ದೊರೆಯುವಂತೆ ಮಾಡಲು ನೆರವು ನೀಡಲಾಗುತ್ತದೆ. ಕಡುಬಡವರು, ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ಹಾಗೂ ನಿರುದ್ಯೋಗೀ ಯುವಜನರಿಗೆ ಲಾಭದಾಯಕ ಬಂಡವಾಳ ಯೋಜನೆಯೊಂದಿಗೆ, ಅಂದರೆ ಉದ್ಯೋಗ ಅವಕಾಶ ಹಾಗೂ ಆದಾಯ ಅವಕಾಶಗಳಿರುವ ಯೋಜನೆಗಳ ಪ್ರಯೋಜನ ದೊರೆಯುವಂತೆ ಮಾಡಲಾಗುವುದು.

- ಗ್ರಾಮೀಣ ಜೀವನೋಪಾಯ ಕಾರ್ಯಕ್ರಮಕ್ಕೆ ಜಿಲ್ಲಾ ಮತ್ತು ರಾಜ್ಯ ಬೆಂಬಲ : ಗ್ರಾಮೀಣ ಜೀವನೋಪಾಯ ಕಾರ್ಯಕ್ರಮಗಳು, ಸ್ಥಾನೀಯ ಹಾಗೂ ರಾಜ್ಯಮಟ್ಟದಲ್ಲಿ ಸಿಗುವ ಬೆಂಬಲಗಳ ಮೇಲೆ ಅವಲಂಬಿಸಿರುತ್ತವೆ. ಈ ಭಾಗದಲ್ಲಿ ಸಮರ್ಥ ಸಿಬ್ಬಂದಿ ಹಾಗೂ ಸಂಸ್ಥೆಗಳನ್ನು ಎರಡೂ ಮಟ್ಟಗಳಲ್ಲಿ ಸ್ಥಾಪಿಸಿ ಗ್ರಾಮೀಣ ಸಂಸ್ಥೆಗಳಿಗೆ ಬೆಂಬಲ ಒದಗಿಸಲಾಗುವುದು.

- ಯೋಜನೆ ನಿರ್ವಹಣೆ : ಸಂಯೋಜನೆ, ಅನುಷ್ಠಾನ ಹಾಗೂ ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಯೋಜನೆಯ ಮೇಲೆ ನಿಗಾ ಇಡುವಂತಹ ವ್ಯವಸ್ಥೆ ಮಾಡಲಾಗುವುದು.

“ತಮಿಳುನಾಡು ಸರಕಾರದ, ಈಗಿರುವ ಸಮುದಾಯಗಳ ಸಹಭಾಗಿತ್ವದೊಂದಿಗಿನ ಅಭಿವೃದ್ಧಿ ಯೋಜನೆಗಳ ಉತ್ತಮ ಕಾರ್ಯಕ್ರಮಗಳ ಅನುರೂಪವಾಗಿ ಈ ಯೋಜನೆಯಿದೆ,” ಎನ್ನುತ್ತಾರೆ ವಿಶ್ವ ಬ್ಯಾಂಕಿನ ಹಿರಿಯ ಆರ್ಥಿಕ ತಜ್ಞ ಮೀನಾ ಮುನ್ಷಿ. “ಇದರಲ್ಲಿ ಬಡ ಜನರೇ, ತಮ್ಮ ಬದುಕಿನ ಸಕಾರಾತ್ಮಕ ಯೋಜನೆಯ ಮತ್ತು ಬದಲಾವಣೆಗಳ ಅನುಷ್ಠಾನದ ಕೇಂದ್ರ ಬಿಂದುವಾಗುತ್ತಾರೆ. ಯೋಜನೆಯು ಬಡತನ ಕಡಿತಗೊಳಿಸುವ ಸಲುವಾಗಿ ಸಾಮಾಜಿಕ ಬಂಡವಾಳ ಹಾಗೂ ಸಂಪನ್ಮೂಲ ಆಧಾರವನ್ನು ಕಡುಬಡವರು ಮತ್ತು ನಿರ್ಗತಿಕರಾಗುವವರ ಬಡತನ ಕಡಿಮೆ ಮಾಡಲಿದೆ. ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮೀಣ ಆಡಳಿತವನ್ನು ಒಳಗೊಳ್ಳುವುದಕ್ಕೆ, ಇದರಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ.”

ವಿಶ್ವಬ್ಯಾಂಕಿನ ರಿಯಾಯಿತಿಯ ಸಾಲ ನೀಡುವ ಸಹ ಸಂಸ್ಥೆಯಾದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥಾ (ಐಡಿಎ) ಈ ಸಾಲವನ್ನು ನೀಡುತ್ತಿದ್ದು 0.75 ಶೇಕಡ ಸೇವಾ ಶುಲ್ಕ ಹೊಂದಿದ್ದು, 10 ವರ್ಷಗಳ ಗ್ರೇಸ್ ಅವಧಿ ಮತ್ತು 35 ವರ್ಷಗಳ ಮೆಚುರಿಟಿ ಅವಧಿ ಹೊಂದಿದದೆ.

###

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ : http://www.worldbank.org/in